# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 17(3) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 11.08.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಇರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು/ತಾಲ್ಲೂಕು ವಾರು ಮಾಹಿತಿ ಒದಗಿಸುವುದು) | ಜಿಲ್ಲಾವಾರು ಮತ್ತು ತಾಲ್ಲೂಕುವಾರು ಶಾಲೆಗಳ ಅಂಕಿಅಂಶ ಅನುಬಂಧಿಸಿದೆ. |
| ಆ) | ಇರುವ ಬಹುತೇಕ ಶಾಲೆಗಳಲ್ಲಿ ಪೀಠೋಪಕರಣಗಳ ಸೌಕರ್ಯಗಳಿಲ್ಲದೇ ಹಾಗೂ ಮಕ್ಕಳಿಗೆ ಕೂರಲು ಕೊಠಡಿಗಳಿಲ್ಲದೇ ಸ್ಥಳಾವಕಾಶದ ಸಮಸ್ಯೆ ಇದ್ದು ಒಂದೇ ಕೊಠಡಿಯಲ್ಲಿ 2-3 ತರಗತಿಯ ಮಕ್ಕಳು ಕುಳಿತು ಪಾಠ ಕೇಳುವ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • 2022-23 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ 105951 ಪೀಠೋಪಕರಣಗಳನ್ನು ಸರಬರಾಜು ಮಾಡಲು ರೂ.70 ಕೋಟಿಗಳು ಮಂಜೂರಾಗಿದ್ದು ಶಾಲೆಗಳಿಗೆ ಬಿಡುಗಡೆಗೊಳಿಸಲಾಗಿದೆ.<br>• ಜಿಲ್ಲಾ ಹಂತದಲ್ಲಿ CSR, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅನುದಾನವನ್ನು ಸಹ ಪೀಠೋಪಕರಣಗಳನ್ನು ನೀಡಲು ಒದಗಿಸಲಾಗಿರುತ್ತದೆ.<br>• 2022-23 ರಿಂದ 2024-25ನೇ ಸಾಲಿನ ವರೆಗೆ 5456 ಸರ್ಕಾರಿ ಶಾಲೆಗಳಲ್ಲಿ, 7544 ಹೊಸ ಕೊಠಡಿಗಳನ್ನು ನಿರ್ಮಾಣ ಮಾಡಲು ರೂ.108247.25 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಹಾಗೂ ರೂ.88029.63ಲಕ್ಷಗಳು ಬಿಡುಗಡೆಯಾಗಿರುತ್ತದೆ. ಸದರಿ ಕಾಮಗಾರಿಗಳಲ್ಲಿ, 5200 ಕೊಠಡಿಗಳು ಮುಕ್ತಾಯಗೊಂಡಿದ್ದು, 851 ಕೊಠಡಿಗಳ ನಿರ್ಮಾಣ ಪ್ರಗತಿಯಲ್ಲಿರುತ್ತದೆ. |

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ ಮಂಜೂರಾದ ವರ್ಷ | ಯೋಜನೆ | ಮಂಜೂರಾದ ಶಾಲೆಗಳು | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆ ಮಾಡಲಾದ ವರ್ಷ | ಬಿಡುಗಡೆ ಮಾಡಲಾದ ಅನುದಾನ | ಮುಕ್ತಾಯಗೊಂಡ ಕೊಠಡಿಗಳ ಸಂಖ್ಯೆ | ಪ್ರಗತಿಯಲ್ಲಿರುವ ಕೊಠಡಿಗಳ ಸಂಖ್ಯೆ | ಪ್ರಾರಂಭವಾಗದಿರುವ ಕೊಠಡಿಗಳ ಸಂಖ್ಯೆ |
|---|---|---|---|---|---|---|---|---|---|---|
| 1 | 2022-23 | ವಿವೇಕ | 4785 | 6601 | 94375.00 | 2022-23 | 46901.84 | 5200 | 230 | 5 |
| | | | | | | 2023-24 | 16960.61 | | | |
| | | | | | | 2024-25 | 11462.11 | | | |
| | | | 117 | 159 | 2342.60 | 2024-25 | 2342.60 | | | |
| 2 | 2024-25 | ಮುಂದುವರೆದ ಯೋಜನೆ | 554 | 784 | 11529.65 | 2024-25 | 10362.47 | 0 | 621 | 322 |
| ಒಟ್ಟು | | | 5456 | 7544 | 108247.25 | | 88029.63 | 5200 | 851 | 327 |

| | | |
|---|---|---|
| | | ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅನುದಾನದ ಲಭ್ಯತೆಯನ್ನು ಆಧರಿಸಿ ಸರ್ಕಾರಿ ಶಾಲೆಗಳಿಗೆ ಪೀಠೋಪಕರಣಗಳನ್ನು ಮತ್ತು ಕೊಠಡಿಗಳನ್ನು ಅವಶ್ಯಕತೆ ಇರುವ ಕಡೆ ಆದ್ಯತೆಯ ಮೇರೆಗೆ ಹಂತ ಹಂತವಾಗಿ ನೀಡಲು ಕ್ರಮವಹಿಸಿದೆ. |
| ಇ) | ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಎಷ್ಟು ಮಕ್ಕಳಿಗೆ ಒಬ್ಬ ಶಿಕ್ಷಕರನ್ನು ನೇಮಿಸಬೇಕೆಂಬ ಮಾನದಂಡಗಳನ್ನು ರೂಪಿಸಲಾಗಿದೆ; | **ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ:** 1 ರಿಂದ 7/8ನೇ ತರಗತಿಗಳಿಗೆ 1:35 ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಶಿಕ್ಷಕರನ್ನು ನೀಡಲಾಗಿದೆ.<br>**ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಂಬಂಧಿಸಿದಂತೆ:** 70 ವಿದ್ಯಾರ್ಥಿಗಳಿಗೆ 1 ವಿಭಾಗದಂತೆ ವಿಂಗಡಿಸಿ 4 ವಿಭಾಗಗಳವರೆಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 07 ಶಿಕ್ಷಕರನ್ನು ನಿಗದಿಪಡಿಸಿದೆ. ಅದರಲ್ಲಿ 06 ವಿಷಯ ಶಿಕ್ಷಕರು ಹಾಗೂ 01 ದೈಹಿಕ ಶಿಕ್ಷಣ ಶಿಕ್ಷಕರನ್ನು ನೀಡಲಾಗಿದೆ.<br>ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ 05 ಅಥವಾ 05ಕ್ಕಿಂತ ಹೆಚ್ಚು ವಿಭಾಗಗಳು ಇರುವ ಶಾಲೆಗಳಿಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ರಂತೆ ಶಿಕ್ಷಕ ಹುದ್ದೆಗಳನ್ನು ನಿಗದಿಪಡಿಸಿದೆ.<br>**ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ:** 1 ರಿಂದ 7/8ನೇ ತರಗತಿಗಳಿಗೆ 1:40 ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಶಿಕ್ಷಕರನ್ನು ನೀಡಲಾಗಿದೆ.<br>**ಅನುದಾನಿತ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ:** ಸಿಬ್ಬಂದಿ ಮಾದರಿ ರಚನಾ ವಿನ್ಯಾಸದಂತೆ ಮೂರು ವಿಭಾಗಗಳಿಗೆ 6 ಸಹ ಶಿಕ್ಷಕರು ಮತ್ತು 1 ದೈಹಿಕ ಶಿಕ್ಷಣ ಶಿಕ್ಷಕರು ನೇಮಕಕ್ಕೆ ಅವಕಾಶವಿರುತ್ತದೆ. |
| ಈ) | ಖಾಸಗಿ ಶಾಲೆಗಳಲ್ಲಿ ಶಿಕ್ಷಕರುಗಳ ಸಂಖ್ಯೆ ಕಡಿಮೆ ಇದ್ದರೂ ಸಹ ಸಾಮರ್ಥ್ಯಕ್ಕೂ ಮೀರಿ ಮಕ್ಕಳನ್ನು ನೋಂದಾಯಿಸಿಕೊಂಡು ಶಾಲೆ ನಡೆಸುತ್ತಿರುವುದರಿಂದ ಮಕ್ಕಳಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳಾವುವು? | ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 5466-5190/2013 ರಲ್ಲಿನ ದಿನಾಂಕ: 06-05-2014 ತೀರ್ಪಿನಂತೆ ಶಾಲೆಯಲ್ಲಿ ಬೋಧನಾ ವಿಷಯ ಹಾಗೂ ಶಾಲೆಯನ್ನು ಆಯ್ಕೆ ಮಾಡಿಕೊಳ್ಳುವುದು ಪೋಷಕರ ಆಯ್ಕೆಯಾಗಿರುವುದರಿಂದ, ಪೋಷಕರು ಆಯ್ಕೆ ಮಾಡಿಕೊಂಡ ಶಾಲೆಗಳಿಗೆ ದಾಖಲು ಮಾಡುವ ಬಗ್ಗೆ ಕ್ರಮವಹಿಸಿರುತ್ತಾರೆ. ಆದ್ದರಿಂದ ಸದರಿ ಪ್ರಶ್ನೆ ಉದ್ಭವಿಸುವುದಿಲ್ಲ. |

**ಇಪಿ 76 ಪಿಎಂಎ 2025**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು